"ಮಧುರ ಮಕ್ಕಳೇ - ಸಂಗಮಯುಗದಲ್ಲಿ ತಂದೆಯು ಹೃದಯಪೂರ್ವಕವಾಗಿ ಮಕ್ಕಳ ಸೇವೆಯನ್ನು ಮಾಡಲು ಬಂದಿರುವರು. ಈಗ ಈ ನಾಟಕ ಮುಗಿಯುವುದು - ನೀವೆಲ್ಲರೂ ಮನೆಗೆ ಹಿಂತಿರುಗಬೇಕಾಗಿದೆ"

ಪ್ರಶ್ನೆ: ಈಗ ಮಕ್ಕಳ ಕರ್ಮಾತೀತ ಸ್ಥಿತಿಯು ಆಗುವುದಿಲ್ಲ, ಅಂತ್ಯದಲ್ಲಿಯೇ ಕರ್ಮಾತೀತ ಸ್ಥಿತಿಯನ್ನು ಪಡೆಯಬೇಕು ಏಕೆ?

ಉತ್ತರ: ಏಕೆಂದರೆ ನೀವು ಆತ್ಮಗಳು ಕರ್ಮಾತೀತರಾದಾಗ ನಿಮಗೆ ಪಾವನ ತತ್ವಗಳಿಂದ ಮಾಡಲ್ಪಟ್ಟ ಶರೀರ ಬೇಕಾಗುವುದು. ಈಗ ಈ ಪಂಚ ತತ್ವಗಳು ಪತಿತ ಆಗಿವೆ. ಯಾವಾಗ ತತ್ವಗಳು ಪಾವನವಾಗುತ್ತವೆ, ಆಗ ನೀವು ಕರ್ಮಾತೀತ ಸ್ಥಿತಿಯನ್ನು ಪಡೆಯುತ್ತೀರಿ. ಮಕ್ಕಳು ನೀವು ಸಂಪೂರ್ಣ ಪಾವನರಾಗಿ ಬಿಟ್ಟಾಗ ಈ ಜಗತ್ತಿನಲ್ಲಿ ಇರುವುದಿಲ್ಲ. ಪಾವನರಾದರೆ ಪಾವನ ಪ್ರಪಂಚದಲ್ಲಿ ಪಾವನ ಶರೀರ ಬೇಕಾಗುವುದು. ಆದುದರಿಂದ ನೀವೀಗ ಹಾಫ್ಕಾಸ್ಟ್ (ಅರ್ಧ ಬ್ರಾಹ್ಮಣರು) ಆಗಿದ್ದೀರಿ. ಅಂತ್ಯದವೇಳೆಗೆ ನಿಮ್ಮ ಬುದ್ಧಿಯೋಗ ಜಮಾ ಆಗುತ್ತದೆ, ಆಗ ನೀವು ಪಾವನರಾಗಿ ಬಿಡುತ್ತೀರಿ. ನಿಮ್ಮ ಎಲ್ಲಾ ವಿಕರ್ಮ ವಿನಾಶವಾಗಿ ಕರ್ಮಾತೀತ ಸ್ಥಿತಿ ಪ್ರಾಪ್ತಿಆಗುತ್ತದೆ.

ಗೀತೆ: ದೂರ ದೇಶದಲ್ಲಿರುವವರು ಪರದೇಶದಲ್ಲಿ ಬಂದರು..........

ಓಂ ಶಾಂತಿ. ದೂರ ದೇಶದಲ್ಲಿರುವ ಯಾತ್ರಿಕನೇ...... ಎಂದು ಆ ಯಾತ್ರಿಕನನ್ನು ಎಲ್ಲಾ ಮನುಷ್ಯ ಮಾತ್ರರು ಅಥವಾ ಜೀವಾತ್ಮರು ಅಗತ್ಯವಾಗಿ ನೆನಪು ಮಾಡುತ್ತಾರೆ. ವಾಸ್ತವಿಕವಾಗಿ ಎಲ್ಲಾ ಜೀವಾತ್ಮಗಳು ಸಹ ಯಾತ್ರಿಕರಾಗಿದ್ದಾರೆ. ತಂದೆ ಹೇಗೆ ಪರಂಧಾಮದಿಂದ ಬರಬೇಕಾಗುತ್ತದೆ ಹಾಗೆಯೇ ನೀವು ಮಕ್ಕಳು ಸಹ ಪಾತ್ರ ಮಾಡಲು ಪರಂಧಾಮದಿಂದ ಬರಬೇಕಾಗುತ್ತದೆ. ನಾನು ಇಡೀ ಕಲ್ಪದಲ್ಲಿ ಒಮ್ಮೆ ಮಾತ್ರ ಬರಬೇಕಾಗುತ್ತದೆ ಆ ಕಾರಣ ದಿವ್ಯ ಅವತರಣೆ ಎಂದು ಕರೆಯಲಾಗುತ್ತದೆ. ನೀವು ಒಮ್ಮೆ ಜನ್ಮ ಪಡೆದ ಮೇಲೆ ಮತ್ತೆ ಇಲ್ಲಿಯೇ ಪುನರ್ಜನ್ಮ ಪಡೆಯುತ್ತಿರುತ್ತೀರಿ. ನಾನು ಒಮ್ಮೆ ಮಾತ್ರ ಬಂದು ಹೃದಯಪೂರ್ವಕವಾಗಿ ಪ್ರೀತಿಯಿಂದ ಮಕ್ಕಳ ಸೇವೆಯನ್ನು ಮಾಡುತ್ತೇನೆ. ತಂದೆಗೆ ಎಲ್ಲಾ ಮಕ್ಕಳು ಪ್ರಿಯರಾಗಿರುತ್ತಾರಲ್ಲವೇ. ಮಕ್ಕಳನ್ನು ಪ್ರೀತಿ ಮಾಡದೇ ಇರುವಂತಹ ಯಾವ ತಂದೆಯೂ ಇರಲು ಸಾಧ್ಯವಿಲ್ಲ. ತಂದೆಯ ಆಸ್ತಿ ಮಕ್ಕಳಿಗೆ ಮಾತ್ರ ಸಿಗುತ್ತದೆ. ಅವರು ಹದ್ದಿನ ತಂದೆ, ಇವರು ಬೇಹದ್ದಿನ ತಂದೆ ಆಗಿದ್ದಾರೆ. ತಂದೆ ಯಾವಾಗ ಬರುವರೆಂದು ಯಾರೂ ತಿಳಿದುಕೊಂಡಿಲ್ಲ. ತಂದೆ ತಿಳಿಸುತ್ತಾರೆ - ಮಧುರ ಮಕ್ಕಳೇ ಈಗ ನಾಟಕ ಮುಗಿಯುತ್ತಿದೆ, ಆದುದರಿಂದ ಈಗ ಮನೆಗೆ ಹಿಂತಿರುಗಬೇಕು. ಆದರೆ ಮನೆಯ ದಾರಿಯನ್ನು ಯಾರೂ ತಿಳಿದುಕೊಂಡಿಲ್ಲ. ಕೇವಲ ವೈಕುಂಠವಾಸಿ, ಪಾರ ನಿರ್ವಾಣ ಗೈದರೆಂದು ಹೇಳಿ ಬಿಡುತ್ತಾರೆ. ನಾಟಕದ ಮಧ್ಯದಲ್ಲಿ ಯಾರೂ ಹಿಂತಿರುಗಲು ಸಾಧ್ಯವಿಲ್ಲ ಎಂದು ಮಕ್ಕಳು ಈಗ ತಿಳಿದುಕೊಂಡಿದ್ದೀರಿ. ಎಲ್ಲರ ಪಾತ್ರ ಪೂರ್ಣವಾದಾಗ ತಂದೆಯು ಬರಬೇಕಾಗುತ್ತದೆ. ನಾವೆಲ್ಲಾ ಆತ್ಮಗಳು ಶರೀರದಲ್ಲಿದ್ದಾಗ ಶರೀರದ ಸಂಬಂಧದಲ್ಲಿ ಸಹೋದರ ಸಹೋದರಿಯರು ಆಗಿರುತ್ತೇವೆಂದು ನೀವು ತಿಳಿದುಕೊಂಡಿದ್ದೀರಿ. ಪ್ರತಿಯೊಬ್ಬರು ತಮ್ಮ ತಮ್ಮ ಪಾತ್ರವನ್ನು ಮುಗಿಸಬೇಕಾಗುತ್ತದೆ. ಪುನಃ ಎಲ್ಲರೂ ತಮ್ಮ ತಮ್ಮ ಸಮಯದಲ್ಲಿ ತಮ್ಮ ಪಾತ್ರವನ್ನು ಪುನರಾವರ್ತನೆ ಮಾಡಬೇಕಾಗುವುದು. ಎಲ್ಲರೂ ತಂದೆಯನ್ನು ಹೇ ಪತಿತ ಪಾವನ ಬಾ, ಹೇ ಸೀತಾರಾಮ ಬಾ ಎಂದು ನೆನಪು ಮಾಡುತ್ತಾರೆ. ಒಬ್ಬರಾಮ, ಒಬ್ಬ ಸೀತೆಗಾಗಿ ಬರುವುದಿಲ್ಲ. ಎಲ್ಲಾ ಸೀತೆಯರ ರಾಮ ಒಬ್ಬರೇ ಆಗಿದ್ದಾರೆ ಎಲ್ಲಾ ಮಕ್ಕಳು ಆ ಒಬ್ಬ ತಂದೆಯ ಭಕ್ತಿ ಮಾಡುತ್ತಾ ನೆನಪು ಮಾಡುತ್ತಾರೆ. ಈ ನಾಟಕದ ಆಯಸ್ಸು ಐದು ಸಾವಿರ ವರ್ಷ. ನೀವು ತಮ್ಮ ಜನ್ಮಗಳನ್ನು ತಿಳಿದುಕೊಂಡಿಲ್ಲ, ನಾನು ತಿಳಿದುಕೊಂಡಿದ್ದೇನೆಂದು ತಂದೆ ತಿಳಿಸುತ್ತಾರೆ. ಕಲ್ಪದ ಆಯಸ್ಸು ಲಕ್ಷಾಂತರ ವರ್ಷವಾದರೆ ಅಷ್ಟೊಂದು ವರ್ಷಗಳ ಮಾತನ್ನು ಯಾರೂ ತಿಳಿಸಲು ಸಾಧ್ಯವಿಲ್ಲ. ಮೊದಲನೆಯ ಮುಖ್ಯ ಮಾತು ಗೀತೆಯ ಭಗವಂತ ಯಾರು? ನಾಟಕದನುಸಾರವಾಗಿ ಮರೆತಿರುವ ಕಾರಣ ತಂದೆ ಬರಬೇಕಾಯಿತು. ಕೇವಲ ಗೀತೆಯನ್ನು ಓದುವುದರಿಂದ ಏನೂ ಆಗುವುದಿಲ್ಲ, ಸ್ವಯಂ ತಂದೆಯೇ ಬಂದು ಮಕ್ಕಳಿಗೆ ರಾಜಯೋಗವನ್ನು ಕಲಿಸುತ್ತಾರೆ. ನಾನು ತಿಳಿಸುವಂತಹ ಎಲ್ಲಾ ಹೊಸ ಮಾತುಗಳು ಪ್ರಾಯಃಲೋಪ ಆಗಿ ಬಿಡುತ್ತವೆ, ಪರಂಪರೆಯವರೆಗೆ ಬರುವುದಿಲ್ಲವೆಂದು ತಂದೆ ತಿಳಿಸುತ್ತಾರೆ. ತಂದೆಯ ನಂತರ ಬರುವವರ (ಧರ್ಮಪಿತ ಇತ್ಯಾದಿ) ಜ್ಞಾನ ಅಂತ್ಯದವರೆಗೂ ಇರುತ್ತದೆ ಹಾಗು ಪರಸ್ಪರ ತಿಳಿಸುತ್ತಿರುತ್ತಾರೆ, ಆದರೆ ತಂದೆ ತಿಳಿಸುವ ಜ್ಞಾನವನ್ನು ತಂದೆ ವಿನಃ ಇಲ್ಲಿ ಯಾರೂ ಸಹ ಹೇಳುವುದಿಲ್ಲ ಹಾಗೂ ಕೇಳುವವರೂ ಇರುವುದಿಲ್ಲ. ಎಲ್ಲರೂ ಮನೆಗೆ ಹೊರಟು ಹೋಗುತ್ತೇವೆ ನಂತರ ಸತ್ಯಯುಗದಲ್ಲಿ ಜನ್ಮ ಪಡೆದಾಗ ನಾವು ಹದಿನಾರು ಕಲಾ ಸಂಪೂರ್ಣರಾಗಿರುತ್ತೇವೆಂದು ತಿಳಿದುಕೊಂಡಿಲ್ಲ. ಅದು ಕೇವಲ ಪ್ರಾಲಬ್ಧವಾಗಿರುತ್ತದೆ. ಒಂದುವೇಳೆ ಹದಿನಾರು ಕಲೆಯಿಂದ ಹದಿನಾಲ್ಕು ಕಲೆಯವರಾಗುತ್ತೇವೆಂದು ಗೊತ್ತಿದ್ದರೆ ಆ ರಾಜ್ಯಭಾಗ್ಯದ ಖುಷಿ ಇರುವುದಿಲ್ಲ. ಮೊಟ್ಟ ಮೊದಲು ಶ್ರೇಷ್ಠಾತಿ ಶ್ರೇಷ್ಠ ಧರ್ಮ ಶಾಸ್ತ್ರ ಇರಬೇಕೆಂದು ತಂದೆ ತಿಳಿಸುತ್ತಾರೆ. ದೇವೀ-ದೇವತಾ ಧರ್ಮದ ಸ್ಥಾಪಕನನ್ನು ಮರೆತಿದ್ದಾರೆ. ಗೀತೆಯ ಮಹಿಮೆ ಎಷ್ಟು ಶ್ರೇಷ್ಠವೋ ಅಷ್ಟೇ ಗೀತಾ ಜ್ಞಾನ ದಾತನ ಮಹಿಮೆಯು ಸಹ ಶ್ರೇಷ್ಠವಾಗಿದೆ. ಅನ್ಯ ಧರ್ಮ ಸ್ಥಾಪನೆ ಮಾಡುವವರಿಗೆ ಭಗವಂತನೆಂದು ಹೇಳಲಾಗದು, ಒಬ್ಬ ನಿರಾಕಾರನೇ ಭಗವಂತನಾಗಿದ್ದಾರೆ. ಉಳಿದವರೆಲ್ಲರೂ ಸಾಕಾರ ಆಗಿದ್ದಾರೆ. ಶ್ರೀ

ಮದ್ಭಗವದ್ಗೀತೆ ಎಂದು ಗಾಯನವಿದೆ. ಅವರೇ ಸರ್ವರ ಸದ್ಗತಿದಾತ ಆಗಿದ್ದಾರೆ. ಈ ಸಮಯದಲ್ಲಿ ಎಲ್ಲರೂ ತಮೋಪ್ರಧಾನ ಸ್ಮಶಾನವಾಸಿಗಳಾಗಿದ್ದಾರೆ. ಪುನಃ ತಂದೆ ಬಂದು ಎಲ್ಲರನ್ನು ಜಾಗೃತ ಮಾಡುತ್ತಾರೆ. ಈ ಹಳೆಯ ಪ್ರಪಂಚವಂತೂ ಸಮಾಪ್ತಿ ಆಗುವುದಿದೆ. ಸಾಸಿವೆಯಂತೆ ಎಲ್ಲರೂ ಚೂರು ಚೂರಾಗಿ ಬಿಡುತ್ತಾರೆ. ಸತ್ಯಯುಗದಲ್ಲಿ ತುಂಬಾ ಚಿಕ್ಕದಾದ ವೃಕ್ಷವಿರುತ್ತದೆ. ಹೇ ಭಗವಂತ, ಹೇ ಸತ್ಯ ಖಂಡದ ಸ್ಥಾಪನೆ ಮಾಡುವಂತಹ ತಂದೆಯೇ......... ಎಂದು ಎಲ್ಲರೂ ಭಗವಂತನನ್ನು ನೆನಪು ಮಾಡುತ್ತಾರೆ. ಆದರೆ ಅವರು ಯಾವಾಗ ಈ ಸೃಷ್ಟಿಗೆ ಬರುವರೆಂದು ತಿಳಿದುಕೊಂಡಿಲ್ಲ. ಏಕೆಂದರೆ ಶಾಸ್ತ್ರಗಳಲ್ಲಿ ಕಲ್ಪದ ಆಯಸ್ಸನ್ನು ಲಕ್ಷಾಂತರ ವರ್ಷವೆಂದು ಬರೆದು ಬಿಟ್ಟಿದ್ದಾರೆ. ಇದನ್ನು ಅಂಧಕಾರವೆಂದು ಕರೆಯಲಾಗುವುದು. ನಮ್ಮ ತಂದೆಯ ವಿನಃ ಬೇರೆ ಯಾರೂ ಸಹ ಜ್ಞಾನ ಸಾಗರರಲ್ಲವೆಂದು ತಿಳಿದುಕೊಂಡಿದ್ದೀರಿ. ಜ್ಞಾನ ಸಾಗರ ತಂದೆ ದೂರ ದೇಶದಿಂದ ಮಕ್ಕಳ ಬಳಿ ಬರುತ್ತಾರೆ. ನಾವೆಲ್ಲರೂ ಅಂಧಕಾರದಲ್ಲಿ ಬಂಧಿಸಿಕೊಂಡು ಈ ನಾಟಕದ ಪಾತ್ರಧಾರಿಗಳಾಗಿದ್ದೇವೆಂದು ತಿಳಿದುಕೊಂಡಿಲ್ಲ. ಸರ್ವ ಶ್ರೇಷ್ಠರು ಯಾರು ಎಂಬುದನ್ನು ತಿಳಿದುಕೊಂಡಿರಬೇಕು. ಕೇವಲ ಸರ್ವವ್ಯಾಪಿ ಎಂದು ತಿಳಿದುಕೊಳ್ಳುವುದೇ ಜ್ಞಾನವಲ್ಲ. ಒಂದುವೇಳೆ ಸರ್ವವ್ಯಾಪಿಯಾದರೆ ಭಕ್ತಿಯನ್ನು ಮಾಡಲು ಆಗುವುದಿಲ್ಲ. ಇದನ್ನು ಅಜ್ಞಾನವೆಂದು ಕರೆಯಲಾಗುವುದು. ಸರ್ವರ ಸದ್ಗತಿದಾತ ತಂದೆ ಎನ್ನುವುದನ್ನು ನೀವು ಈಗ ತಿಳಿದುಕೊಂಡಿದ್ದೀರಿ. ಅವರ ಹೆಸರು ಪರಮಪಿತ ಪರಮಾತ್ಮ ಶಿವ, ಸರ್ವ ತಂದೆಯರಿಗೂ ತಂದೆ ಆಗಿದ್ದಾರೆ. ಲೌಕಿಕ ತಂದೆಯರು ಒಂದೊಂದು ಜನ್ಮಕ್ಕೂ ಒಬ್ಬೊಬ್ಬರು ಸಿಗುತ್ತಾ ಬಂದಿದ್ದಾರೆ.

ಎಲ್ಲರಿಗೂ ಸರ್ವ ಶ್ರೇಷ್ಠ ತಂದೆ ಒಬ್ಬರೇ ಆಗಿದ್ದಾರೆ ನಂತರ ಎಲ್ಲರು ನಂಬರ್ವಾರ್ ಬರುತ್ತಾರೆ. ಮೊಟ್ಟ ಮೊದಲು ದೇವೀ-ದೇವತಾ ವೃಕ್ಷದವರು ಪರಮಧಾಮದಿಂದ ಇಳಿಯುವರು. ಈಗ ಆ ದೇವೀ-ದೇವತಾ ರಚನೆಯನ್ನು ತಂದೆಯು ರಚಿಸುತ್ತಿದ್ದಾರೆ. ಬ್ರಹ್ಮನ ಮೂಲಕ ಬ್ರಾಹ್ಮಣರನ್ನು ಹೇಗೆ ರಚಿಸುವುದು? ತಂದೆ ಪ್ರಜಾಪಿತ ಬ್ರಹ್ಮನ ಮೂಲಕ ದತ್ತು ಮಾಡಿಕೊಳ್ಳುತ್ತಾರೆ. ಬಾಬಾ ನಾವು ನಿಮ್ಮವರೇ ಆಗಿದ್ದೆವು, ಈಗಲೂ ನಿಮ್ಮವರೇ ಆಗಿದ್ದೇವೆ, ಮೊಟ್ಟ ಮೊದಲು ನಾವು ಸತ್ಯಯುಗದಲ್ಲಿ ಜನ್ಮ ಪಡೆದು ಬಂದಿದ್ದೇವೆಂದು ಮಕ್ಕಳು ಹೇಳುತ್ತಾರೆ.

ಈ ಸಮಯದಲ್ಲಿ ನೀವು ಹಾಫ್ಕಾಸ್ಟ್ (ಅರ್ಧ ಬ್ರಾಹ್ಮಣರು) ಆಗಿರುವಿರಿ, ಶೂದ್ರರಿಂದ ಬ್ರಾಹ್ಮಣರಾಗಿ ಸಂಪೂರ್ಣ ಪವಿತ್ರರು ಹಾಗೂ ಕರ್ಮಾತೀತರು ಅಂತ್ಯದಲ್ಲಿ ಆಗುತ್ತೀರಿ. ಅಂತ್ಯದ ವೇಳೆಗೆ ಬುದ್ಧಿಯೋಗವು ಪೂರ್ತಿಯಾಗಿ ಜಮಾ ಆಗುತ್ತಾ ಎಲ್ಲಾ ವಿಕರ್ಮ ಭಸ್ಮವಾಗಿ ಬಿಡುತ್ತದೆ. ಶರೀರ ಪತಿತವಾಗಿರುವ ಕಾರಣ ನಿಮಗೆ ಇಲ್ಲಿ ಪಾವನರೆಂದು ಕರೆಯುವುದಿಲ್ಲ. ಈಗ ನೀವು ಪತಿತರಿಂದ ಪಾವನರಾಗುತ್ತಿದ್ದೀರಿ. ನಂತರ ಸತ್ಯಯುಗದಲ್ಲಿ ನಿಮಗೆ ಪಾವನ ಶರೀರ ಪ್ರಾಪ್ತಿಯಾಗುತ್ತದೆ. ಸಂಪೂರ್ಣ ಪಾವನವಾಗಿ ಬಿಟ್ಟಾಗ ನೀವು ಇಲ್ಲಿ ಇರಲಾಗುವುದಿಲ್ಲ. ಆತ್ಮ ಪವಿತ್ರವಾದಾಗ ಪಂಚ ತತ್ವವು ಪವಿತ್ರವಾಗಿ ಬಿಡುತ್ತದೆ. ಮಕ್ಕಳೀಗ ಸಂಗಮಯುಗದಲ್ಲಿದ್ದೀರಿ. ಸತ್ಯ-ಸತ್ಯ ಕುಂಭಮೇಳ ಇದಾಗಿದೆ. ನೀರಿನ ಗಂಗೆಯ ಬಳಿ ಪತಿತ-ಪಾವನಿ ಎಂದು ಹೋಗುವುದು ಭಕ್ತಿ ಮಾರ್ಗವಾಗಿದೆ. ಸನ್ಯಾಸಿಗಳು ಆತ್ಮವನ್ನು ನಿರ್ಲೇಪವೆಂದು ಹೇಳುತ್ತಾ ಗಂಗಾ ಸ್ನಾನ ಮಾಡುತ್ತಾ ಬಂದಿದ್ದಾರೆ. ತಂದೆ ತಿಳಿಸುತ್ತಾರೆ - ಮಕ್ಕಳೇ ಭಕ್ತಿ ಮಾರ್ಗದಲ್ಲಿ ನೀವು ಬಹಳ ಕೇಳಿದ್ದೀರಿ, ಈಗ ಸತ್ಯ ಅಸತ್ಯವನ್ನು ನೀವೇ ನಿರ್ಣಯ ಮಾಡಿ. ಇದು ಅಮರ ಕಥೆಯಾಗಿದೆ. ಇದರಿಂದ ನೀವು ಅಮರಪುರಿಯ ಮಾಲೀಕರಾಗುತ್ತೀರಿ, ಅಲ್ಲಿ ನಿಮಗೆ ಎಂದಿಗೂ ಮೃತ್ಯು ಕಬಳಿಸುವುದಿಲ್ಲ. ಅಲ್ಲಿ ಎಂದಿಗೂ ಇಂತಹವರು ಸತ್ತು ಹೋದರೆಂದು ಹೇಳುವುದಿಲ್ಲ. ಇಲ್ಲಿ ಮೃತ್ಯುವಿಗೆ ಎಷ್ಟು ಭಯ ಪಡುತ್ತಾರೆ, ಆದರೆ ಅಲ್ಲಿ ಕೇವಲ ವಸ್ತ್ರ ಬದಲಾವಣೆ ಮಾಡಿಕೊಳ್ಳುತ್ತಾರೆ. ಭಾರತದ ಮಹಿಮೆ ಬಹಳ ಶ್ರೇಷ್ಠವಾಗಿದೆ. ತಂದೆಯ ಮಹಿಮೆಯಷ್ಟು ಭಾರತದ ಮಹಿಮೆ ಇದೆ. ಭಾರತದಲ್ಲಿ ಇದುವರೆಗೂ ಲಕ್ಷ್ಮೀ ನಾರಾಯಣರ ಮಂದಿರ ಮಾಡುತ್ತಿರುತ್ತಾರೆ. ಆದರೆ ತಂದೆ ಯಾವಾಗ ಬಂದಿದ್ದರೆಂದು ತಂದೆಯನ್ನು ತಿಳಿದುಕೊಂಡಿಲ್ಲ. ಸತ್ಯಯುಗದಲ್ಲಿ ದೇವೀ-ದೇವತೆಗಳಿದ್ದರು, ಒಂದುವೇಳೆ ಸತ್ಯಯುಗದ ಆಯಸ್ಸು ಲಕ್ಷಾಂತರ ವರ್ಷವೆಂದು ಹೇಳುವುದಾದರೆ ಅಲ್ಲಿಯ ಜನ ಸಂಖ್ಯೆ ಲೆಕ್ಕವಿಲ್ಲದಷ್ಟು ಆಗಬೇಕಾಗುತ್ತದೆ. ಯಾರೂ ಸಹ ಬುದ್ಧಿಯಿಂದ ಕೆಲಸ ತೆಗೆದುಕೊಳ್ಳುವುದಿಲ್ಲ ಅರ್ಥಾತ್ ಯೋಚನೆ ಮಾಡುವುದಿಲ್ಲ. ಗೋ ಮುಖದಿಂದ ಗಂಗೆ ಬರುವುದೆಂದು ಹೇಳುವುದೂ ಸಹ ಜ್ಞಾನದ ಮಾತಾಗಿದೆ. ಹಾಗಾದರೆ ಸೂಕ್ಷ್ಮವತನದಲ್ಲಿ ಬಸವ (ಎತ್ತು) ಎಲ್ಲಿಂದ ಬರುತ್ತದೆ. ಈ ಶಾಸ್ತ್ರಗಳು ಅರ್ಧ ಕಲ್ಪದಿಂದ (ದ್ವಾಪರದಿಂದ) ನಡೆದು ಬರುತ್ತದೆ. ಈ ಎಲ್ಲಾ ಮಾತುಗಳನ್ನು ಅತೀ ಪ್ರೀತಿಯ ತಂದೆ ತನ್ನ ಮಕ್ಕಳಿಗೆ ತಿಳಿಸಿಕೊಡುತ್ತಾರೆ. ಜಗತ್ತಿನವರೆಲ್ಲರೂ ನನ್ನ ಮಕ್ಕಳೇ ಆಗಿದ್ದಾರೆ ಆದರೆ ನೀವು ತುಂಬಾ ಪ್ರೀತಿಯ ಮಕ್ಕಳಾಗಿದ್ದೀರಿ. ಲಕ್ಷ್ಮೀ ನಾರಾಯಣರು ಯಾವಾಗ ರಾಜ್ಯಭಾರ ಮಾಡಿದರೆಂದು ಯಾರಿಗೂ ಗೊತ್ತಿಲ್ಲ. ರಾಧಾ-ಕೃಷ್ಣರ ಜನ್ಮದಿನ ಆಚರಿಸುತ್ತಾರೆ, ಆದರೆ ಲಕ್ಷ್ಮೀ-ನಾರಯಣರ ಬಗ್ಗೆ ಯಾರಿಗೂ ಗೊತ್ತಿಲ್ಲ. ರಾಮನನ್ನು ತ್ರೇತಾ ಹಾಗೂ ಕೃಷ್ಣನನ್ನು ದ್ವಾಪರದಲ್ಲಿ ತೋರಿಸುತ್ತಾರೆ. ರಾಧಾಕೃಷ್ಣರು ಸತ್ಯಯುಗದವರಾಗಿದ್ದಾರೆ. ಎಲ್ಲಾ ಧರ್ಮಗಳು ಹೇಗೆ ಪುನರಾವರ್ತನೆಯಾಗಿ ಯಾವ ಧರ್ಮ ಯಾವ ಸಮಯದಲ್ಲಿ ಸ್ಥಾಪನೆ ಆಗುತ್ತದೆ. ಈ ಎಲ್ಲವನ್ನು ನೀವು ತಿಳಿದುಕೊಂಡಿದ್ದೀರಿ. ಆಯಾ ಧರ್ಮದವರು ಧರ್ಮ ಸ್ಥಾಪನೆ ಮಾಡಿದ ನಂತರ ಮನೆಗೆ ಹಿಂತಿರುಗುತ್ತಾರೆಂದು ತಿಳಿದುಕೊಂಡಿದ್ದಾರೆ. ಒಂದುವೇಳೆ ಧರ್ಮ ಸ್ಥಾಪನೆ ಮಾಡಿದವರು ಮನೆಗೆ ಹಿಂತಿರುಗಿದರೆ ಆ ಧರ್ಮದ ಪಾಲನೆ ಮಾಡುವವರು ಯಾರು? ಪ್ರತಿಯೊಬ್ಬ ಮನುಷ್ಯ ತನ್ನ ರಚನೆಯನ್ನು ರಚಿಸಿದ ಮೇಲೆ ಪಾಲನೆಯನ್ನು ಮಾಡುತ್ತಾನೆ, ವಿನಃ ವಿನಾಶ ಮಾಡುವುದಿಲ್ಲ. ಹದ್ದಿನ ರಚನೆಯನ್ನು ರಚಿಸುವ ತಂದೆ ಅಲ್ಪಕಾಲದ ಕ್ಷಣ ಭಂಗುರ ಸುಖವನ್ನು ಕೊಡಬಹುದು. ಯಾರಿಗಾದರೂ ಮಕ್ಕಳಿಲ್ಲದಿದ್ದರೆ ತಮ್ಮ ಕುಲದ ಉದ್ಧಾರ ಹೇಗೆ ಆಗುತ್ತದೆಂದು ತಿಳಿದುಕೊಳ್ಳುತ್ತಾರೆ,

ಆದರೆ ತಂದೆಯು ಈ ಸಮಯದಲ್ಲಿ ಎಲ್ಲರೂ ಪತಿತ ಭ್ರಷ್ಟಾಚಾರಿಗಳಾಗಿದ್ದಾರೆಂದು ತಿಳಿಸುತ್ತಾರೆ. ಒಂದು ಹಾಡಿನಲ್ಲಿ "ಭಾರತದ ಸ್ಥಿತಿ ಏನಾಗಿ ಬಿಟ್ಟಿದೆ" ಮತ್ತೊಂದು ಹಾಡಿನಲ್ಲಿ "ನಮ್ಮ ಭಾರತ ಎಲ್ಲಕ್ಕಿಂತ ಶ್ರೇಷ್ಠವಾಗಿದೆ" ಎಂಬ ಹಾಡನ್ನು ಹಾಡುತ್ತಾರೆ. ಈಗ ಭಾರತ ಶ್ರೇಷ್ಠವಾಗಿದೆಯೇನು? ಈಗಂತೂ ಸಂಪೂರ್ಣ ಪತಿತವಾಗಿ ಬಿಟ್ಟಿದೆ. ಮಕ್ಕಳೇ ಇದು ಆಟವಾಗಿರುವ ಕಾರಣ ಧೈರ್ಯವಾಗಿರಿ. ಈಗ ನಿಮ್ಮ ದುಃಖದ ದಿನಗಳು ಪೂರ್ತಿಯಾಗಿ ಸುಖದ ದಿನಗಳು ಬರುತ್ತಿವೆಯೆಂದು ತಂದೆ ತಿಳಿಸುತ್ತಾರೆ. ಈ ನರಕವನ್ನು ಸ್ವರ್ಗ ಮಾಡಲು ಪರಮಧಾಮದಲ್ಲಿರುವ ತಂದೆ ಪರದೇಶದಲ್ಲಿ ಬಂದಿದ್ದಾರೆ. ಇದೇ ನನ್ನ ಜನ್ಮ ಸ್ಥಾನವೆಂದು ತಂದೆ ತಿಳಿಸುತ್ತಾರೆ. ಇಲ್ಲವೆಂದರೆ ನಿರಾಕಾರ ತಂದೆ ಎಲ್ಲಿ, ಯಾರ ಶರೀರದಲ್ಲಿ ಬರುತ್ತಾರೆಂದು ಯಾರಾದರು ತಿಳಿಸಬೇಕಿತ್ತಲ್ಲವಾ? ಯಾವಾಗ ಏನು ಮಾಡಲು ಬಂದರು? ಇದನ್ನು ಯಾರೂ ತಿಳಿಸಿಕೊಡಲು ಸಾಧ್ಯವಿಲ್ಲ. ಪರಮಪಿತ ಪರಮಾತ್ಮ ಬಂದು ಪತಿತರನ್ನು ಪಾವನ ಹೇಗೆ ಮಾಡುತ್ತಾರೆಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಮಕ್ಕಳೇ ನನ್ನ ಬಳಿ ಬೇರೆ ಯಾವುದೇ ಸಮಾಧಾನವಿಲ್ಲವೆಂದು ತಂದೆ ತಿಳಿಸುತ್ತಾರೆ. ಮುದ್ದು ಮಕ್ಕಳೇ ನೀವು ನನ್ನನ್ನೇ ಪತಿತ ಪಾವನ ಸರ್ವಶಕ್ತಿವಂತನೆಂದು ಹೇಳುತ್ತೀರಿ. ಈಗ ನಿಮಗೆ ಪಂಚ ವಿಕಾರಗಳ ಮೇಲೆ ವಿಜಯಿ ಆಗುವ ಶಕ್ತಿ ಬೇಕಾಗಿದೆ. ಆದರೆ ಇಲ್ಲಿ ಹಿಂಸಾತ್ಮಕ ಯುದ್ಧದ ಮಾತಿಲ್ಲ, ಇದು ಗುಪ್ತವಾಗಿದೆ. ಕೇವಲ ನನ್ನನ್ನು ನೆನಪು ಮಾಡುವುದಕ್ಕೆ ಅಜಪಾಜಪ ಎಂದು ಕರೆಯಲಾಗುತ್ತದೆ. ಈಗ ಎಲ್ಲರ ವಾನಪ್ರಸ್ಥ ಸ್ಥಿತಿಯಾಗಿದ್ದು ಎಲ್ಲರೂ ಮನೆಗೆ ಹಿಂತಿರುಗಬೇಕಾಗಿದೆ. ಮನೆ ಶಾಂತಿಧಾಮವಾಗಿದ್ದು ಅಲ್ಲಿಂದ ಪುನಃ ತಾನಾಗಿಯೇ ನೀವು ಸುಖಧಾಮದಲ್ಲಿ ಬಂದು ಬಿಡುತ್ತೀರಿ. ಶಾಂತಿ ನಿಮ್ಮ ಸ್ವಧರ್ಮವಾಗಿದೆ, ಆದರೆ ಈ ರಾವಣ ರಾಜ್ಯದಲ್ಲಿ ನಿಮಗೆ ಶಾಂತಿ ಸಿಗುವುದಿಲ್ಲ. ಸ್ವಲ್ಪ ಸಮಯಕ್ಕಾಗಿ ಶಾಂತಿಯನ್ನು ಇಷ್ಟ ಪಡುವುದಾದರೆ ಅಶರೀರಿ ಆಗಿ ಕುಳಿತುಕೊಳ್ಳಿ. ಶಾಂತಿ ಎಲ್ಲರಿಗೂ ಬೇಕಾಗಿದೆ. ಒಂದುವೇಳೆ 101 ಕೋಟಿ ಮಂದಿ ಶಾಂತಿಯಲ್ಲಿ ಕುಳಿತುಬಿಟ್ಟರೂ ಸಹ ಶಾಂತಿ ಸ್ಥಾಪನೆಯಾಗಲು ಸಾಧ್ಯವಿಲ್ಲ. ಏಕೆಂದರೆ ಇದು ಅಶಾಂತಿಯ ಪ್ರಪಂಚವಾಗಿದೆ. ಆದುದರಿಂದ ಶಾಂತಿಗಾಗಿಯಾವ ಸಲಹೆಯನ್ನೂ ಮಾಡಲು ಆಗುತ್ತಿಲ್ಲ. ಇದು ಕೇವಲ ಪರಮಪಿತ ಪರಮಾತ್ಮನ ಜವಾಬ್ದಾರಿಯಾಗಿದೆ. ದೇವೀ-ದೇವತೆಗಳ ರಾಜ್ಯವಿತ್ತು. ಅದನ್ನು ವೈಕುಂಠವೆಂದು ಕರೆಯಲಾಗಿತ್ತು. ಈಗ ಕಲಿಯುಗದ ಅಂತ್ಯ ದುಃಖಧಾಮವಿದೆ, ಎಂದು ನೀವು ತಿಳಿದುಕೊಂಡಿದ್ದೀರಿ. ಅದು ಶಾಂತಿಧಾಮ, ಮಧುರ ಮನೆಯಾಗಿದ್ದು ಮಧುರ ತಂದೆಯು ಸಹ ಅಲ್ಲಿಇರುತ್ತಾರೆ. ಅದಾಗಿದೆ ಸುಖಧಾಮ, ಇದು ದುಃಖಧಾಮವಾಗಿದೆ. ಇವೆರಡರ ಮಧ್ಯದಲ್ಲಿ ಬೇರೆ-ಬೇರೆ ಧರ್ಮಗಳು ಸ್ಥಾಪನೆಯಾಗಿ ವೃದ್ಧಿ ಆಗುತ್ತವೆ. ಆದರೆ ಅವರು ಕಲ್ಪದ ಆಯಸ್ಸು ಲಕ್ಷಾಂತರ ವರ್ಷವೆಂದು ಹೇಳಿರುವ ಕಾರಣ ಇದನ್ನು ಘೋರ ಅಂಧಕಾರವೆಂದು ಕರೆಯಲಾಗುವುದು. ಸತ್ಯಯುಗ ಸಂಪೂರ್ಣ ಬೆಳಕಾಗಿದೆ (ಸುಖವಿರುತ್ತದೆ). ಮೂಲವತನದಲ್ಲಿ ಅಪಾರವಾದ ಶಾಂತಿ ಇರುತ್ತದೆ. ಈ ರೀತಿ ಮೂಲವತನದಿಂದ ನಾವು ಪಾತ್ರ ಮಾಡಲು ಬಂದಿದ್ದೇವೆ.

ತಂದೆ ತಿಳಿಸುತ್ತಾರೆ - ಹೇ! ಆತ್ಮಗಳೇ ತಮ್ಮ ಕಿವಿಯೆಂಬ ಇಂದ್ರಿಯಗಳಿಂದ ಕೇಳುತ್ತಿದ್ದೀರಾ? ಈ ನಾಟಕದ ಚಕ್ರ ಹೇಗೆ ಸುತ್ತುತ್ತದೆ ಎಂದು ನಿಮಗೆ ನೆನಪು ಇದೆಯೇ. ಈ ಸಮಯದಲ್ಲಿ ನೀವು ತ್ರಿಕಾಲದರ್ಶಿಗಳಾಗಿದ್ದೀರಿ. ಬ್ರಾಹ್ಮಣರಾದ ನಿಮ್ಮ ವಿನಃ ಯಾರೂ ತ್ರಿಕಾಲದರ್ಶಿಗಳು ಇಲ್ಲ. ಋಷಿ-ಮುನಿಗಳೂ ನಾಸ್ತಿಕರಾಗಿದ್ದು ನಾವು ಈಶ್ವರನನ್ನು ತಿಳಿದುಕೊಂಡಿಲ್ಲವೆಂದು ಹೇಳುತ್ತಿದ್ದರು. ಈಗ ನೀವು ಆಸ್ತಿಕರಾಗಿದ್ದು ತಂದೆ ಹಾಗು ಸೃಷ್ಟಿ ಚಕ್ರದ ಆದಿ-ಮಧ್ಯ-ಅಂತ್ಯವನ್ನು ತಿಳಿದುಕೊಂಡಿದ್ದೀರಿ. ಈಗ ನಿಮಗೆ ಮೂರು ಲೋಕಗಳ ಜ್ಞಾನ ಪ್ರಾಪ್ತಿಯಾಗಿದೆ. ನಿಮ್ಮ ವಿನಃ ಬೇರೆ ಯಾರಲ್ಲೂ ಈ ಜ್ಞಾನವಿಲ್ಲ. ಲಕ್ಷ್ಮೀ ನಾರಾಯಣ ಹಾಗೂ ಮನುಷ್ಯರಿಗೂ ಸಹ ತ್ರಿಲೋಕೀನಾಥ, ತ್ರಿಕಾಲದರ್ಶಿ ಎಂದು ಹೇಳುವುದಿಲ್ಲ. ನೀವು ಮೂರು ಲೋಕ ಹಾಗು ಮೂರು ಕಾಲವನ್ನು ತಿಳಿದವರಾಗಿದ್ದೀರಿ. ಈ ವಿಷ್ಣುವಿನ ಎರಡುರೂಪ ಲಕ್ಷ್ಮೀ ನಾರಾಯಣ ಆಗಿದ್ದಾರೆ, ರಾಧಾ-ಕೃಷ್ಣರೇ ಲಕ್ಷ್ಮೀ-ನಾರಾಯಣರಾಗುತ್ತಾರೆ. ಈ ಸಮಯದಲ್ಲಿ ಎಷ್ಟೊಂದು ಸುಂದರವಾದ ಅವರ ಸ್ಮರಣಾರ್ಥ ಮಂದಿರವನ್ನು ಮಾಡಿದ್ದಾರೆ, ಆದರೆ ಅವರ ಜೀವನ ಚರಿತ್ರೆಯನ್ನು ತಿಳಿದುಕೊಳ್ಳಬೇಕಾಗುವುದು. ಸರ್ವ ಶ್ರೇಷ್ಠ ಭಗವಂತ ಒಬ್ಬರೇ ಆಗಿದ್ದು, ಶಿವ ಅವರ ಹೆಸರಾಗಿದೆ. ರುದ್ರನೆಂದೂ ಸಹ ಹೇಳುವರು. ಇದು ರುದ್ರ ಜ್ಞಾನ ಯಜ್ಞವಾಗಿದೆ, ಎಂದಿಗೂ ಕೃಷ್ಣ ಜ್ಞಾನ ಯಜ್ಞವೆಂದು ಹೇಳುವುದಿಲ್ಲ. ಏಕೆಂದರೆ ಕೃಷ್ಣ ಸತ್ಯಯುಗದ ಪ್ರಥಮ ರಾಜಕುಮಾರನಾಗಿದ್ದು ಅಲ್ಲಿ ಯಜ್ಞ ರಚನೆ ಮಾಡುವ ಅವಶ್ಯಕತೆ ಏನು? ರುದ್ರ ಯಜ್ಞದಿಂದ ವಿನಾಶ ಜ್ವಾಲೆ ಪ್ರಜ್ವಲಿತವಾಗುತ್ತದೆ. ಸತ್ಯಯುಗದಲ್ಲಿ ಯಜ್ಞ ರಚನೆಯ ಅವಶ್ಯಕತೆ ಇರುವುದಿಲ್ಲ. ಈ ಜ್ಞಾನ ಯಜ್ಞದ ವಿನಃ ಈ ಸಮಯದಲ್ಲಿ ಉಳಿದೆಲ್ಲವೂ ಭೌತಿಕ ಯಜ್ಞಗಳಾಗಿವೆ. ತಂದೆಯು ತಿಳಿಸಿದ್ದಾರೆ- ಇದನ್ನು ಯಜ್ಞವೆಂದು ಏಕೆ ಹೇಳುತ್ತಾರೆ? ಏಕೆಂದರೆ ಈ ಹಳೆಯ ಪ್ರಪಂಚದಎಲ್ಲಾ ಸಾಮಗ್ರಿ ಈ ಯಜ್ಞದಲ್ಲಿ ಸ್ವಾಹಾ ಆಗುವುದಿದೆ. ಆದುದರಿಂದ ಪರಮಪಿತ ಪರಮಾತ್ಮ ಯಜ್ಞ ರಚಿಸಿ ಆ ಯಜ್ಞದಿಂದ ಮನುಷ್ಯರನ್ನು ದೇವತೆಗಳನ್ನಾಗಿ ಮಾಡುತ್ತಾರೆಂದು ಹೇಳಲಾಗುತ್ತದೆ. ದೇವತೆಗಳ ಹೆಜ್ಜೆ ಈ ಹಳೆಯ ಪ್ರಪಂಚದಲ್ಲಿ ಬರಲು ಸಾಧ್ಯವಿಲ್ಲ . ನಿಮಗೆ ತಂದೆ ಎಲ್ಲವನ್ನು ಸಾಕ್ಷಾತ್ಕಾರ ಮಾಡಿಸಿದ್ದಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಮ್ಮ ಸ್ವಧರ್ಮ ಶಾಂತಿಯಲ್ಲಿ ಸದಾ ಇರಬೇಕಾಗಿದೆ. ಇದು ವಾನಪ್ರಸ್ಥ ಸ್ಥಿತಿ ಆಗಿದೆ ಆದ್ದರಿಂದ ನಿರಂತರವಾಗಿ ತಂದೆಯನ್ನು ನೆನಪು ಮಾಡಬೇಕು.

2. ಕರ್ಮಾತೀತ ಆಗುವ ಸಲುವಾಗಿ ಸಂಪೂರ್ಣ ಪಾವನರಾಗಬೇಕು. ಇರುವಂತಹ ವಿಕರ್ಮದ ಹೊರೆಯನ್ನು ನೆನಪಿನ ಯಾತ್ರೆಯಲ್ಲಿದ್ದು ಸಮಾಪ್ತಿ ಮಾಡಿಕೊಳ್ಳಬೇಕು. ನೆನಪಿನ ಶಕ್ತಿಯಿಂದ ವಿಕಾರಗಳ ಮೇಲೆ ವಿಜಯಿಗಳಾಗಬೇಕು.

ವರದಾನ: ಶುದ್ಧ ಸಂಕಲ್ಪಗಳ ಮುತ್ತಿಗೆಯ ಮೂಲಕ ಸದಾ ಛತ್ರಛಾಯೆಯ ಅನುಭೂತಿ ಮಾಡುವ, ಮಾಡಿಸುವಂತಹ ಧೃಡ ಸಂಕಲ್ಪಧಾರಿ ಭವ.

ತಮ್ಮ ಒಂದು ಶುದ್ಧ ಹಾಗೂ ಶ್ರೇಷ್ಠ ಶಕ್ತಿಶಾಲಿ ಸಂಕಲ್ಪವು ಬಹಳಷ್ಟು ಚಮತ್ಕಾರ ಮಾಡಿಸಬಹುದು. ಶುದ್ಧ ಸಂಕಲ್ಪಗಳ ಬಂಧನ ಅಥವಾ ಮುತ್ತಿಗೆಯು ಬಲಹೀನ ಆತ್ಮರಿಗಾಗಿ ಛತ್ರಛಾಯೆಯಾಗಿದೆ, ಸುರಕ್ಷತೆಯ ಸಾಧನ ಅಥವ ಕೋಟೆಯಾಗಿ ಬಿಡುವುದು. ಈ ಅಭ್ಯಾಸದಲ್ಲಿ ಮೊದಲು ಯುದ್ಧವಾಗುತ್ತದೆ, ವ್ಯರ್ಥ ಸಂಕಲ್ಪವು ಶುದ್ಧ ಸಂಕಲ್ಪವನ್ನು ತುಂಡುಗೊಳಿಸುತ್ತದೆ ಆದರೆ ಒಂದುವೇಳೆ ತಮ್ಮ ಜೊತೆಗಾರ (ಸಂಗಾತಿ) ಸ್ವಯಂ ತಂದೆಯಾಗಿದ್ದಾರೆ ಎಂಬ ಧೃಡ ಸಂಕಲ್ಪವೇನಾದರೂ ಇದ್ದರೆ, ವಿಜಯದ ತಿಲಕವು ಸದಾ ಇದ್ದೇ ಇರುತ್ತದೆ, ಇದರಲ್ಲಿ ಕೇವಲ ನೆನಪು ಮಾಡಿಕೊಳ್ಳಬೇಕು. ಇದರಿಂದ ಸ್ವತಹವಾಗಿಯೇ ವ್ಯರ್ಥವು ಸಮಾಪ್ತಿಯಾಗಿ ಬಿಡುತ್ತದೆ.

ಸ್ಲೋಗನ್: ಫರಿಶ್ತಾ ಸ್ವರೂಪದ ಸಾಕ್ಷಾತ್ಕಾರ ಮಾಡಿಸುವುದಕ್ಕಾಗಿ ಶರೀರದಿಂದ ಭಿನ್ನವಾಗಿರುವ ಅಭ್ಯಾಸ ಮಾಡಿರಿ.